<u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 74 |
| ಸದಸ್ಯರ ಹೆಸರು | : | ಶ್ರೀ ಎಸ್.ಎಲ್ ಭೋಜೇಗೌಡ<br>(ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 13.02.2024 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ<br>ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಮೈಸೂರು ಲ್ಯಾಂಪ್ಸ್ ಉದ್ಯಮವನ್ನು ಯಾವಾಗ ಎಲ್ಲಿ ಪ್ರಾರಂಭಿಸಲಾಯಿತು; ಇದರ ಇತಿಹಾಸ ಹಾಗೂ ಧ್ಯೇಯೋದ್ದೇಶಗಳೇನು; (ವಿವರವಾದ ಮಾಹಿತಿ ನೀಡುವುದು) | ದಿ ಮೈಸೂರ್ ಲ್ಯಾಂಪ್ ವರ್ಕ್ಸ್ ಲಿಮಿಟೆಡ್ ಕಂಪನಿಯನ್ನು ಬೆಂಗಳೂರಿನಲ್ಲಿ ದಿನಾಂಕ 26.08.1936 ರಂದು ಸ್ಥಾಪಿಸಲಾಯಿತು. ಇದು ರಾಜ್ಯ ಸರ್ಕಾರದ ಸಾರ್ವಜನಿಕ ಉದ್ದಿಮೆಯಾಗಿದ್ದು ವಿವಿಧ ಬಗೆಯ ವಿದ್ಯುತ್ ದೀಪಗಳು ಮತ್ತು ವಿದ್ಯುತ್ ದೀಪಗಳ ಫಿಟ್ಟಿಂಗ್ಸ್ ಗಳನ್ನು ಉತ್ಪಾದನೆ ಮಾಡುವ ಚಟುವಟಿಕೆಯನ್ನು ಹೊಂದಿತ್ತು.<br><br>ಈ ಕಂಪನಿಯ ಒಟ್ಟು ಷೇರು ಬಂಡವಾಳ ರೂ.11,81,02,330/- ಗಳಾಗಿದ್ದು ಇದರಲ್ಲಿ ರಾಜ್ಯ ಸರ್ಕಾರವು ಶೇ.91.07 ರಷ್ಟು ಮತ್ತು ರಾಜ್ಯ ಸರ್ಕಾರದ ಅಧೀನ ಸಂಸ್ಥೆಯಾದ NGEF Limited ಸಂಸ್ಥೆಯು ಶೇ.3.33 ರಷ್ಟು ಷೇರು ಬಂಡವಾಳ ಹೊಂದಿರುತ್ತವೆ. ಉಳಿದ ಶೇ.5.6 ರಷ್ಟು ಷೇರು ಬಂಡವಾಳವನ್ನು ಸಾರ್ವಜನಿಕ ಷೇರುದಾರರು ಹೊಂದಿರುತ್ತಾರೆ.<br><br>ಕಂಪನಿಯ ನಿವ್ವಳ ಮೌಲ್ಯದ (networth) ಸಂಪೂರ್ಣ ಸವೆತದ ಕಾರಣ ಡಿಸೆಂಬರ್ 1996 ರಲ್ಲಿ ಇದನ್ನು Sick Industry ಎಂದು ಪರಿಗಣಿಸಿ Board for Industrial and Financial Reconstruction (BIFR) ಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. BIFR ಸಂಸ್ಥೆಯು ಅಂತಿಮವಾಗಿ 18.07.2000 ರಲ್ಲಿ ಕಂಪನಿಯನ್ನು ಸಮಾಪನಗೊಳಿಸಲು ತಿಳಿಸಿತು.<br><br>BIFR, AAIFR (Appellate Authority for Industrial and Financial Reconstruction) ಮತ್ತು ರಾಜ್ಯ ಉನ್ನತಾಧಿಕಾರ ಸಮಿತಿಯ ಶಿಫಾರಸ್ಸಿನಂತೆ ರಾಜ್ಯ ಸರ್ಕಾರವು ಕಂಪನಿಯ ಎಲ್ಲಾ ಚಟುವಟಿಕೆಗಳನ್ನು ಸೂಕ್ತ ಕಾರ್ಯವಿಧಾನಗಳನ್ನು ಪಾಲಿಸಿ ಸ್ಥಗಿತಗೊಳಿಸಲು ದಿನಾಂಕ 04.01.2002 ರಂದು ಆದೇಶಿಸಿತು ಹಾಗೂ ಕಂಪನಿಯ ನೌಕರರಿಗೆ ಸ್ವಯಂ ನಿವೃತ್ತಿ (VRS) ಯೋಜನೆಯನ್ನು ಜಾರಿಗೊಳಿಸಿತು. ಕಾರ್ಮಿಕ ಇಲಾಖೆಯೂ ಸಹ ಕಂಪನಿಯ ಚಟುವಟಿಕೆಗಳನ್ನು ಸ್ಥಗಿತಗೊಳಿಸಲು ದಿನಾಂಕ 30.08.2002 ರಂದು ಆದೇಶಿಸಿತು. ಅದರಂತೆ ಕಂಪನಿಯ ಎಲ್ಲಾ ಕಾರ್ಯಚಟುವಟಿಕೆಗಳನ್ನು ದಿನಾಂಕ 11.06.2003 ರಂದು ಸ್ಥಗಿತಗೊಳಿಸಲಾಯಿತು. |

| | | |
|---|---|---|
| | | ಕಂಪನಿಯಲ್ಲಿದ್ದ 1556 ನೌಕರರ ಪೈಕಿ 1420 ನೌಕರರು ಸ್ವಯಂ ನಿವೃತ್ತಿ ಯೋಜನೆಯನ್ನು ಒಪ್ಪಿಕೊಂಡು ಸಂಬಂಧಪಟ್ಟ ಪ್ರಯೋಜನಗಳನ್ನು ಪಡೆದಿರುತ್ತಾರೆ. 48 ನೌಕರರು ಸರ್ಕಾರದ ಅನ್ಯ ಸಂಸ್ಥೆಗಳಲ್ಲಿ ವಿಲೀನಗೊಂಡಿರುತ್ತಾರೆ. ಕಂಪನಿಯ ಕಾರ್ಯ ಚಟುವಟಿಕೆಗಳು ಸ್ಥಗಿತಗೊಂಡ ದಿನಾಂಕ 16.06.2003 ರಂತೆ ಕಂಪನಿಯಲ್ಲಿ ಉಳಿದಿದ್ದ 88 ನೌಕರರ ಪೈಕಿ ಸೇವಾ ಅವಧಿ ಬಾಕಿ ಇದ್ದ 79 ನೌಕರರನ್ನು ಸರ್ಕಾರದ ಆದೇಶಗಳ ದಿನಾಂಕ 10.07.2014, 09.12.2015 ಮತ್ತು 13.01.2017 ರನ್ವಯ Karnataka State Minerals Corporation Limited (KSMCL) ಸಂಸ್ಥೆಯಲ್ಲಿ ವಿಲೀನಗೊಳಿಸಿ ಸರ್ಕಾರದ ಆದೇಶವನ್ನು ಹೊರಡಿಸಲಾಯಿತು. ಅದರಂತೆ ಒಟ್ಟು 63 ನೌಕರರು KSMCL ಸಂಸ್ಥೆಯಲ್ಲಿ ಕಾರ್ಯ ವರದಿ ಮಾಡಿ ಕೊಂಡಿರುತ್ತಾರೆ. ಸಿಆಸು ಇಲಾಖೆ ಆದೇಶ ದಿನಾಂಕ 13.05.2020ರನ್ವಯ ಅರ್ಹ 12 ನೌಕರರು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ವಿಲೀನಗೊಂಡಿರುತ್ತಾರೆ. ಉಳಿದ 4 ನೌಕರರು KSMCL ನಲ್ಲಿ ಕಾರ್ಯವರದಿ ಮಾಡಿಕೊಂಡಿರುವುದಿಲ್ಲ.<br><br>ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ದಿನಾಂಕ 10.02.2021ರ ಆದೇಶದಂತೆ ಕಂಪನಿಯ ಎಲ್ಲಾ ಉಳಿದ ನೌಕರರಿಗೆ ಕಂಪನಿಯು ಕಾರ್ಯಚಟುವಟಿಕೆ ಸ್ಥಗಿತಗೊಳಿಸಿದ ದಿನಾಂಕದಿಂದ KSMCL ಸಂಸ್ಥೆಯಲ್ಲಿ ಅಥವಾ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕಾರ್ಯವರದಿ ಮಾಡಿಕೊಂಡ /ಮಾಡಿಕೊಳ್ಳಬೇಕಾದ ದಿನಾಂಕದವರೆಗೆ ಅರ್ಹ ಪರಿಹಾರ ಮೊತ್ತವನ್ನು ಪಾವತಿಸಲಾಗಿದೆ.<br><br>ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದ ದಿನಾಂಕ 10.02.2021ರ ಆದೇಶದಂತೆ ದಿ ಮೈಸೂರ್ ಲ್ಯಾಂಪ್ ವರ್ಕ್ಸ್ ಲಿಮಿಟೆಡ್ ಕಂಪನಿಯು ಕಾರ್ಯತತ್ಪರವಾಗಿದೆ. 2022-23ನೇ ಸಾಲಿನ ಹಣಕಾಸು ವರ್ಷದವರೆಗೂ ಕಂಪನಿಯ ವಾರ್ಷಿಕ ಹಣಕಾಸು ತಃಖ್ತೆಗಳನ್ನು ಅಂತಿಮಗೊಳಿಸಲಾಗಿದ್ದು ಸದರಿ ಸಾಲಿನವರೆಗೂ ಕಂಪನಿಯ ಷೇರುದಾರರ ಸಾಮಾನ್ಯ ಸಭೆಯನ್ನು ನಡೆಸಲಾಗಿದೆ. 2022-23ನೇ ಸಾಲಿನ ಅಂತ್ಯಕ್ಕೆ ಕಂಪನಿಯು ಒಟ್ಟು ರೂ.390.23 ಕೋಟಿ ಸಂಚಿತ ನಷ್ಟವನ್ನು ದಾಖಲಿಸಿದೆ.<br><br>ಸರ್ಕಾರದ ಆದೇಶ ದಿನಾಂಕ 01.12.2020 ರಂತೆ ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ಕಂಪನಿಯ ಕಾರ್ಖಾನೆಯ ಜಾಗದಲ್ಲಿ ಕರ್ನಾಟಕದ ಸಂಸ್ಕೃತಿಯನ್ನು ಬಿಂಬಿಸುವ ಮತ್ತು ಬೆಂಗಳೂರು ನಗರದ ಹೃದಯ ಭಾಗದಲ್ಲಿ ಹಸಿರು ವಾತಾವರಣವನ್ನು ಕಾಪಾಡುವ ವಿನೂತನ ಯೋಜನೆಯಾದ "Experience Bengaluru Project" ಅನ್ನು ಅನುಷ್ಠಾನಗೊಳಿಸಲು ಅನುಮೋದಿಸಲಾಗಿದೆ. ಮುಂದುವರೆದು, ಸದರಿ ಆದೇಶದಲ್ಲಿ ತಿಳಿಸಿರುವಂತೆ ಕಂಪನಿಯನ್ನು ಶೇ.100 ರಷ್ಟು ರಾಜ್ಯ ಸರ್ಕಾರದ ಷೇರುದಾರ ಕಂಪನಿಯನ್ನಾಗಿ ಮಾಡಲು ಅಗತ್ಯ ಕ್ರಮಗಳನ್ನು ವಹಿಸಲಾಗುತ್ತಿದೆ. |

| | | |
|---|---|---|
| (ಆ) | ಮೈಸೂರು ಲ್ಯಾಂಪ್ಸ್ ಕಂಪನಿಯ ಆಸ್ತಿಗಳು ಯಾವುವು; ಅವುಗಳು ಎಲ್ಲಿವೆ; ಅವುಗಳ ಇಂದಿನ ಮೌಲ್ಯವೇನು; ಇದರ ಮೇಲೆ ಸರ್ಕಾರದ ಹೊಣೆಗಾರಿಕೆ ಎಷ್ಟಿದೆ; ಹಾಲಿ ಸ್ಥಿತಿ ಏನು; (ವಿವರವಾದ ಮಾಹಿತಿ ನೀಡುವುದು) | ದಿ ಮೈಸೂರ್ ಲ್ಯಾಂಪ್ ವರ್ಕ್ಸ್ ಲಿಮಿಟೆಡ್ ಸಂಸ್ಥೆಯು ಹೊಂದಿರುವ ಸ್ಥಿರಾಸ್ತಿಯ ವಿವರಗಳು ಕೆಳಕಂಡಂತಿದೆ.<br><br>1. ಬೆಂಗಳೂರು ನಗರ ಮಲ್ಲೇಶ್ವರಂ ಪಶ್ಚಿಮ ಹಳೆ ತುಮಕೂರು ರಸ್ತೆಯಲ್ಲಿ 21 ಎಕರೆ 6.73 ಗುಂಟೆ ಭೂಮಿ ಮತ್ತು ಕಟ್ಟಡಗಳು.<br><br>2. ಬೆಂಗಳೂರು ನಗರ ರಾಜಮಹಲ್ ವಿಲಾಸ್ ಬಡಾವಣೆ, 2ನೇ ಹಂತದಲ್ಲಿ ಹೆಚ್.ಐ.ಜಿ ಬಂಗಲೆ ಇರುವ 307.82 ಚದರ ಮೀಟರ್ ನಿವೇಶನ.<br>3. ಬೆಂಗಳೂರು ನಗರ ರಾಜಮಹಲ್ ವಿಲಾಸ್ ಬಡಾವಣೆ, 2ನೇ ಹಂತದಲ್ಲಿ ಹೆಚ್.ಐ.ಜಿ ಬಂಗಲೆ ಇರುವ 309.12 ಚದರ ಮೀಟರ್ ನಿವೇಶನ.<br>4. ಮುಂಬೈ ನಗರದ ವೊರ್ಲಿ ಪ್ರದೇಶದ ಟಿ.ವಿ ಇಂಡಸ್ಟ್ರಿಯಲ್ ಎಸ್ಟೇಟ್‌ನ ವೊರ್ಲಿ ಇಂಡಸ್ಟ್ರಿಯಲ್ ಪ್ರಾಪರ್ಟೀಸ್ ಪ್ರೈವೇಟ್ ಲಿಮಿಟೆಡ್ ಸಮುಚ್ಛಯದಲ್ಲಿ 1ನೇ ಅಂತಸ್ತಿನಲ್ಲಿ 879 ಚದರ ಅಡಿ ಕಟ್ಟಡ.<br>5. ಅಹಮದಾಬಾದ್ ನಗರದ ನವರಂಗ್ ವೃತ್ತದಲ್ಲಿರುವ ಜಿ.ಟಿ. ಅಸೋಸಿಯೇಷನ್ ಸಮುಚ್ಛಯದ 8ನೇ ಅಂತಸ್ತಿನಲ್ಲಿ 1043 ಚದರ ಅಡಿ ಕಟ್ಟಡ ಹಾಗೂ ಕೆಳನೆಲ ಮಹಡಿಯಲ್ಲಿ 300 ಚದರ ಅಡಿ ಜಾಗ.<br><br>ಮೇಲ್ಕಂಡ ಕ್ರಮ ಸಂಖ್ಯೆ (1) ರಲ್ಲಿರುವ ಬೆಂಗಳೂರಿನ ಕಾರ್ಖಾನೆಯ ಸಂಪೂರ್ಣ ಸ್ವತ್ತು ಮತ್ತು ಕ್ರಮ ಸಂಖ್ಯೆ(4) ರಲ್ಲಿನ ಮುಂಬೈ ಕಛೇರಿ ಆಸ್ತಿಗಳನ್ನು ದಿನಾಂಕ 12.03.2008 ರಂದು registered "Mortgage Deed" ಮೂಲಕ ರಾಜ್ಯ ಸರ್ಕಾರಕ್ಕೆ ಅಡಮಾನ ಇರಿಸಲಾಗಿದೆ.<br><br>ಕಂಪನಿಯ Business Valuation ಮಾಡಲು M/s Adroit Technical Services Pvt. Ltd. ರವರನ್ನು ಟೆಂಡರ್ ಪ್ರಕ್ರಿಯೆಯ ಮೂಲಕ ಆಯ್ಕೆ ಮಾಡಲಾಗಿದ್ದು, ಸದರಿ ಸಂಸ್ಥೆಯವರು ದಿನಾಂಕ 31.03.2021 ರಂತೆ ಕಂಪನಿಯ Business Valuation ಮಾಡಿ ವರದಿಯನ್ನು ನೀಡಿರುತ್ತಾರೆ. ಅದರಂತೆ ಕಂಪನಿಯ ಒಟ್ಟು ಸ್ಥಿರಾಸ್ತಿಗಳ ಮೌಲ್ಯ ರೂ.435.30 ಕೋಟಿ ಆಗಿರುತ್ತದೆ.<br><br>ದಿನಾಂಕ 31.03.2023 ರಂತೆ ಕಂಪನಿಯ ಮೇಲೆ ರಾಜ್ಯ ಸರ್ಕಾರದ ಉದ್ದಿಮೆಗಳ ಮತ್ತು ಇತರೆ ಹೊಣೆಗಾರಿಕೆಗಳು ಒಟ್ಟು ರೂ.377.63 ಕೋಟಿ ಇರುತ್ತದೆ. ವಿವರ ಕೆಳಕಂಡಂತಿದೆ:<br><br>1. ರಾಜ್ಯ ಸರ್ಕಾರದ ಸಾಲಗಳು – ರೂ.120.96 ಕೋಟಿ<br>2. ರಾಜ್ಯ ಸರ್ಕಾರದ ಸಾಲಗಳ ಮೇಲಿನ ಬಡ್ಡಿ – ರೂ.218.23 ಕೋಟಿ<br>3. ರಾಜ್ಯ ಸರ್ಕಾರದ ಸಾರ್ವಜನಿಕ ಉದ್ದಿಮೆಗಳಾದ MPM, Hatti Gold Mines ಮತ್ತು Krishna Bhagya Jala Nigam ಗಳಿಂದ ಪಡೆದ ಸಾಲಗಳು – ರೂ.3.50 ಕೋಟಿ<br>4. ರಾಜ್ಯ ಸರ್ಕಾರದ ಸಾರ್ವಜನಿಕ ಉದ್ದಿಮೆಗಳಿಂದ ಪಡೆದ ಸಾಲಗಳ ಮೇಲಿನ ಬಡ್ಡಿ – ರೂ.26.67 ಕೋಟಿ<br>5. ಇತರೆ ಹೊಣೆಗಾರಿಕೆಗಳು – ರೂ.8.27 ಕೋಟಿ |

| | | |
|---|---|---|
| (ಇ) | ಈ ಕಂಪನಿಯನ್ನು ಸರ್ಕಾರವು ನೇರವಾಗಿ ತನ್ನ ವಶಕ್ಕೆ ತೆಗೆದು ಕೊಳ್ಳದೆ ಟ್ರಸ್ಟ ನೋಂದಾಯಿಸಿ ಖಾಸಗಿ ವ್ಯಕ್ತಿಗಳನ್ನು ಟ್ರಸ್ಟಿಗಳನ್ನಾಗಿ ನೇಮಿಸಿರುವುದು ನಿಜವೇ; ಇದರಿಂದ ಸರ್ಕಾರದ ಆಸ್ತಿಯನ್ನು ಖಾಸಗಿಯವರಿಗೆ ಪರಭಾರೆ ಮಾಡಿದಂತಾಗುವುದಿಲ್ಲವೇ; (ವಿವರವಾದ ಮಾಹಿತಿ ನೀಡುವುದು) | ಸರ್ಕಾರದ ಆದೇಶ ದಿನಾಂಕ 23.02.2021ರಲ್ಲಿ ದಿ ಮೈಸೂರ್ ಲ್ಯಾಂಪ್ ವರ್ಕ್ಸ್ ಲಿಮಿಟೆಡ್ ಮತ್ತು NGEF Limited ಭೂಮಿಗಳಲ್ಲಿ ಹಾಗೂ ಸರ್ಕಾರವು ಗುರುತಿಸುವ ಇತರೆ ಯೋಜನೆಗಳಲ್ಲಿ ವಿನೂತನ ಯೋಜನೆಗಳನ್ನು ಅನುಷ್ಠಾನಗೊಳಿಸಲು "Public Charitable Trust" ಸ್ಥಾಪಿಸಲು ಅನುಮೋದಿಸಲಾಗಿರುತ್ತದೆ. ಅದರಂತೆ "Bengaluru Heritage and Environment Trust" ಅನ್ನು ದಿನಾಂಕ 08.06.2021 ರಂದು (ತಿದ್ದುಪಡಿ ದಿನಾಂಕ 07.01.2022) ನೋಂದಾಯಿಸಲಾಗಿರುತ್ತದೆ. ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಸದರಿ Trust ನ ಖಾಯಂ ಅಧ್ಯಕ್ಷರಾಗಿರುತ್ತಾರೆ. ಈ Trust ನಲ್ಲಿ 7 ಸರ್ಕಾರದ Trustee ಗಳು ಮತ್ತು 5 ನಾಗರೀಕ Trustee ಗಳು ಇರಬಹುದಾಗಿದ್ದು, ಹಾಲಿ ಸರ್ಕಾರದ ಆದೇಶದ ದಿನಾಂಕ 23.02.2021 ರಂತೆ 7 ಸರ್ಕಾರದ Trustee ಗಳು ಮತ್ತು ಸರ್ಕಾರದ ಆದೇಶ ದಿನಾಂಕ 23.06.2021 ರಂತೆ 2 ನಾಗರೀಕ Trustee ಗಳನ್ನು ನಾಮ ನಿರ್ದೇಶನಗೊಳಿಸಲಾಗಿದೆ.<br><br>ಸರ್ಕಾರವು ಸದರಿ Trust ಗೆ ಈವರೆಗೆ ಯಾವುದೇ ಯೋಜನೆಗಳನ್ನು ವಹಿಸಿರುವುದಿಲ್ಲ ಹಾಗೂ Trust ವತಿಯಿಂದಲೂ ಯಾವುದೇ ಚಟುವಟಿಗಳನ್ನು ಕೈಗೊಂಡಿರುವುದಿಲ್ಲ.<br><br>ದಿ ಮೈಸೂರ್ ಲ್ಯಾಂಪ್ ವರ್ಕ್ಸ್ ಲಿಮಿಟೆಡ್ ಕಂಪನಿಯ ಬೆಂಗಳೂರಿನ ಕಾರ್ಖಾನೆಯ ಸಂಪೂರ್ಣ ಆಸ್ತಿಯನ್ನು ರಾಜ್ಯ ಸರ್ಕಾರಕ್ಕೆ ಅಡಮಾನ ಇರಿಸಲಾಗಿದೆ. ಇದರ ಹೊರತಾಗಿ ಕಂಪನಿಯ ಯಾವುದೇ ಆಸ್ತಿಯನ್ನು ಯಾವ ಸಂಸ್ಥೆಗೂ ಯಾವುದೇ ರೀತಿಯಲ್ಲಿ ಪರಭಾರೆ ಮಾಡಿರುವುದಿಲ್ಲ. |
| (ಈ) | ನಗರ ಹೃದಯ ಭಾಗದಲ್ಲಿರುವ ಕಂಪನಿಯ ಆಸ್ತಿಯನ್ನು ಸರ್ಕಾರವೇ ನೇರವಾಗಿ ತನ್ನ ವಶಕ್ಕೆ ತೆಗೆದುಕೊಂಡು ಸಾರ್ವಜನಿಕರಿಗೆ ಅನುಕೂಲವಾಗುವಂತೆ ಮೈಸೂರು ಮಹಾರಾಜರ ಹೆಸರಿನಲ್ಲಿ ಇಂಜಿನಿಯರಿಂಗ್ ಕಾಲೇಜು ಮತ್ತು ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸಲು ಕ್ರಮವಹಿಸುವುದೇ? (ವಿವರ ನೀಡುವುದು) | ದಿ ಮೈಸೂರ್ ಲ್ಯಾಂಪ್ ವರ್ಕ್ಸ್ ಲಿಮಿಟೆಡ್ ಕಂಪನಿಯ ಬೆಂಗಳೂರಿನ ಕಾರ್ಖಾನೆಯ ಸಂಪೂರ್ಣ ಆಸ್ತಿಯನ್ನು ರಾಜ್ಯ ಸರ್ಕಾರಕ್ಕೆ ಅಡಮಾನ ಇರಿಸಲಾಗಿದೆ.<br><br>ಸರ್ಕಾರದ ಆದೇಶ ದಿನಾಂಕ 01.12.2020 ರಲ್ಲಿ ಆದೇಶಿಸಿರುವಂತೆ ದಿ ಮೈಸೂರ್ ಲ್ಯಾಂಪ್ ವರ್ಕ್ಸ್ ಲಿಮಿಟೆಡ್ ಕಂಪನಿಯನ್ನು ಶೇ.100 ರಷ್ಟು ಸರ್ಕಾರದ ಷೇರುದಾರ ಕಂಪನಿಯನ್ನಾಗಿ ಮಾಡುವ ನಿಟ್ಟಿನಲ್ಲಿ ಕಾನೂನು ಅಭಿಪ್ರಾಯಗಳನ್ನು ಪಡೆದು ಅದರಂತೆ ಎಲ್ಲಾ ಅಗತ್ಯ ಕ್ರಮಗಳನ್ನು ವಹಿಸಲಾಗುತ್ತಿದೆ.<br><br>ಕಂಪನಿಯು ಶೇ.100 ರಷ್ಟು ಸರ್ಕಾರದ ಷೇರುದಾರ ಕಂಪನಿಯಾದ ನಂತರ ಕಂಪನಿಯ ಆಸ್ತಿಯನ್ನು ಸಾರ್ವಜನಿಕ ಉದ್ದೇಶಗಳಿಗೆ ಬಳಸಲು ಅಗತ್ಯ ಯೋಜನೆಯನ್ನು ರೂಪಿಸಲಾಗುವುದು. |

ಸಂಖ್ಯೆ:ಸಿಐ 02 ಸಿಇಎಲ್ 2024(ಇ)

(ಎಂ.ಬಿ. ಪಾಟೀಲ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು.